Reg. No. | | | | | | | | |

# BBAKAL 104

## Credit Based I Semester B.B.A. Degree Examination, Nov./Dec. 2018
## (2017-18 Batch Onwards Scheme)
## KANNADA
## Kannada Language (Paper – I)

Time : 3 Hours Max. Marks : 80

I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : (3×8=24)

1) ಭಕ್ತ ಮತ್ತು ಭಗವಂತನ ಅವಿನಾಭಾವ ಸಂಬಂಧವನ್ನು ವಚನಕಾರರು ತಮ್ಮ ವಚನಗಳಲ್ಲಿ ಹೇಗೆ ನಿರೂಪಿಸುತ್ತಾರೆ ? ವಿವರಿಸಿರಿ.

**ಅಥವಾ**

'ಹಡೆದವ್ವ' ಪದ್ಯಭಾಗದ ಜನಪದ ತ್ರಿಪದಿಗಳಲ್ಲಿ ನಿರೂಪಿತವಾಗಿರುವ ತಾಯಿ ಹಾಗೂ ತವರಿನ ಮಹತ್ವವನ್ನು ವಿವರಿಸಿರಿ.

2) 'ಕಾಯಕನಿಷ್ಠವಾದ ಜೀವನ ಪದ್ಧತಿಯೊಂದನ್ನು ರೂಢಿಸಿಕೊಳ್ಳುವುದು ವರ್ತಮಾನದ ಅಗತ್ಯ' ಎನ್ನುವುದನ್ನು ಪ್ರಸನ್ನ ಅವರು ತಮ್ಮ ಲೇಖನದಲ್ಲಿ ಹೇಗೆ ಪ್ರತಿಪಾದಿಸಿದ್ದಾರೆ ? ವಿವೇಚಿಸಿ.

**ಅಥವಾ**

ಡಾ. ರಾಜಕುಮಾರ್ ಓರ್ವ 'ಬೆವರಿನ ಮನುಷ್ಯ' ಎನ್ನುವುದನ್ನು ಲೇಖಕರು ಹೇಗೆ ಸಮರ್ಥಿಸುತ್ತಾರೆ ? ಚರ್ಚಿಸಿರಿ.

3) ಕಂಪ್ಯೂಟರ್ ಮತ್ತು ನವಮಾಧ್ಯಮಗಳಲ್ಲಿ ಕನ್ನಡದ ಬಳಕೆ ಬೆಳೆದುಬಂದ ಬಗೆಯನ್ನು ಬರೆಯಿರಿ.

**ಅಥವಾ**

ನವಮಾಧ್ಯಮಗಳ ಬಳಕೆಯಲ್ಲಿನ ಒಳಿತು ಕೆಡುಕುಗಳೇನು ? ವಿವರಿಸಿರಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : (3×5=15)

1) 'ಪಂಚನದಿಗಳು ಹರಿಯುವ ನಾಡಿನಲ್ಲಿಂದು ಕಂಬನಿಯ ಕಾಲುವೆ ಹರಿಯುತ್ತಿದೆ' ಸಿದ್ಧಲಿಂಗಯ್ಯನವರ ಈ ಮಾತನ್ನು ವಿವೇಚಿಸಿರಿ.

**ಅಥವಾ**

ತುಳು ಸಂಸ್ಕೃತಿಯು ಸಾವಿರ ಎಸಳಿನ ತಾವರೆಯ ಹಾಗೆ – ಹೇಗೆ ? ನಿರೂಪಿಸಿರಿ.

P.T.O.

2) ಪದಕುಸಿಯೆ ನೆಲವಿಹುದು ಎನ್ನುವುದನ್ನು ಮಾಧವ ಮಾಸ್ತರರು ಶಿಷ್ಯ ದತ್ತುವಿಗೆ ಮನಗಾಣಿಸಿದ ಬಗೆ ಹೇಗೆ ? ವಿವರಿಸಿರಿ.

**ಅಥವಾ**

ಸೃಜನಶೀಲ ರಚನೆಗಳ ಸೃಷ್ಟಿಗೆ ಏಕಾಂತ ಹಾಗೂ ಮೌನದ ಅಗತ್ಯವಿದೆ ಎನ್ನುವುದನ್ನು ಜೋಗಿಯವರ ಪ್ರಬಂಧ ಹೇಗೆ ನಿರೂಪಿಸುತ್ತದೆ ?

3) ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಲು ವಿದ್ಯಾರ್ಥಿಯು ಗಮನಿಸಬೇಕಾದ ಅಂಶಗಳು ಯಾವುವು ?

**ಅಥವಾ**

ಲೇಖನ ಚಿಹ್ನೆಗಳು ಯಾವುವು ? ಅವುಗಳನ್ನು ಸಮರ್ಪಕವಾಗಿ ಬಳಸುವುದು ಹೇಗೆ ? ವಿವರಿಸಿರಿ.

III. ಈ ಕೆಳಗಿನವುಗಳಲ್ಲಿ **ಒಂದರ** ಸಂದರ್ಭ ಸೂಚಿಸಿ ಭಾವಾರ್ಥ ವಿವರಿಸಿರಿ : **(1×5=5)**

1) ಬಿಡುಗಡೆಯ ಸಿರಿಬೆಳಕು ಕಂಡಿತು
ಗಾಂಧಿ ತಪಸಿನ ಪುಣ್ಯದಿ
ದೇಶದೇಳ್ಗೆಗೆ ಭಾಷೆಯೇಳ್ಗೆಗೆ
ದುಡಿವ ನಾವ್ ಸಮ ಮಣ್ಣಿಗೆ

2) ಯಾರದೋ ಮನೆಯ ಬೆಳಗಿದ ಯಾರೋ
ಹಚ್ಚಿಟ್ಟ ಹಣತೆ
ಪ್ರಾಣಪಥವ ಕಾಪಿಟ್ಟ ಬೆವರ ಹರಕೆ
ಮೊರದಲ್ಲಿ ಏನೆಲ್ಲಾ ಹರಿವು
ರೂಪ ರೂಪಾಂತರದಲ್ಲಿ ಮೆರೆಯದ
ಮೂಲ ಅರಿವು

IV. ಯಾವುದಾದರೂ **ಎರಡು** ಸಾಲುಗಳಿಗೆ ಸಂದರ್ಭ, ಸ್ವಾರಸ್ಯ ವಿವರಿಸಿರಿ : **(2×4=8)**

1) ತನ್ನಂಗ ತನ್ನ ಮಗಳಂಗ ನೋಡಿದರ ಕಣ್ಣ ಮುಂದೈತೆ ಕೈಲಾಸ

2) ಕನ್ನಡಿಗೆ ಕನ್ನಡಿಯ ತೋರಿದಂತಿಪ್ಪರು

3) ನಾನು ಕಂಪನಿಯಲ್ಲ, ರಕ್ತ ಮಾಂಸದ ಮುದ್ದೆ

4) ಕಳಮೆ ಕಮ್ಮೆನೊದಿಂಜಿ ಕಂಡೊ,

ಪೊರ್ಲುಡಿಂಚಿನ ಭೂಮಿ ಉಂಡೊ

(ಕಳಮೆ ಕಂಪಿನ ನೆಲ್ಲ ಹೊಲಗಳು

ತುಳುವ ನಾಡತಿ ಚೆಲುವು ಭುವಿಯೊಳು)

V. ಅ) ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2×4=8)**

1) ಸೂಳ್ನುಡಿ

2) ಡಾ. ಸಿದ್ಧಲಿಂಗಯ್ಯ

3) ತುಳು ಭಾಷೆ–ಸಾಹಿತ್ಯ

4) ದೇ. ಜವರೇಗೌಡ.

ಆ) ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2×4=8)**

1) ಬರಗೂರು ರಾಮಚಂದ್ರಪ್ಪ

2) ದೇಸಿ ಜೀವನ ಪದ್ಧತಿ

3) ಜೋಗಿ

4) ಮರಿಯಮ್‌ಬೀ.

VI. **ಒಂದು** ವಾಕ್ಯದಲ್ಲಿ ಉತ್ತರಿಸಿರಿ : **(12×1=12)**

1) ನಿರಾಳ ಮಂತ್ರಗೋಷ್ಠ – ಇದು ಯಾರ ಕೃತಿ ?

2) ಮೋಳಿಗೆ ಮಾರಯ್ಯನ ಅಂಕಿತ ಯಾವುದು ?

3) ತುಳುವನ್ನು ದ್ರಾವಿಡ ಭಾಷೆಗಳಲ್ಲೇ ಪ್ರೌಢಭಾಷೆ ಎಂದು ಗುರುತಿಸಿದ ಭಾಷಾ ವಿದ್ವಾಂಸ ಯಾರು ?

4) ಕವಿ ಸಿದ್ಧಲಿಂಗಯ್ಯನವರ ಆತ್ಮಕಥನದ ಹೆಸರೇನು ?

5) 'ನನಗೂ ವಿಶ್ರಾಂತಿ ಬೇಕು' – ಇದು ಯಾವ ಭಾಷೆಯಿಂದ ಅನುವಾದಿಸಲ್ಪಟ್ಟ ಕತೆ ?

6) ಪ್ರಸನ್ನ ಅವರು ಹೆಗ್ಗೋಡಿನಲ್ಲಿ ಸ್ಥಾಪಿಸಿದ ಕೈಮಗ್ಗ ಬಟ್ಟೆ ಉತ್ಪಾದನೆ ಸಂಸ್ಥೆಯ ಹೆಸರೇನು ?

7) 'ಶರಪಂಜರ' ಕಾದಂಬರಿಯನ್ನು ಬರೆದ ಕಾದಂಬರಿಕಾರ್ತಿ ಯಾರು ?

8) ಡಾ. ರಾಜಕುಮಾರ್ ಯಾವ ನಾಟಕ ಕಂಪನಿಯಲ್ಲಿ ಕಲಾವಿದನಾಗಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದರು ?

9) ಸಾಫ್ಟ್‌ವೇರ್ – ಇದಕ್ಕೆ ಸಂವಾದಿಯಾಗಿ ಬಳಸುವ ಕನ್ನಡ ಪದ ಯಾವುದು ?

10) ಜಗತ್ತಿನ ಅತಿದೊಡ್ಡ ಮುಕ್ತ ಮಾಹಿತಿ ಕೋಶ ಯಾವುದು ?

11) ಸರಕಾರವು ಅಂಗೀಕರಿಸಿರುವ ಕನ್ನಡ ಸಾಫ್ಟ್‌ವೇರ್ ಯಾವುದು ?

12) 'ಇಂಡಿಯಾ ಎಗೈನ್ಸ್ಟ್ ಕರಪ್ಷನ್' ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದ ಸಾಮಾಜಿಕ ಜಾಲತಾಣ ಯಾವುದು ?

---